ಸಾಕ್ಷಿಯನ್ನು ದಿಃ **27.01.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು .

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಸಿ ಆರ್ ಆರ್ ವಕೀಲರಿಂದಃ–**

ಅರ್ಜಿದಾರರನ್ನು ಮತ್ತು ಅವರ ವಕೀಲರನ್ನು ಕರೆಯಲಾಯಿತು ಗೈರು ಹಾಜರಿ ಆದ್ದರಿಂದ ಅರ್ಜಿದಾರರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಸಿ ವಿ ಎಸ್ ವಕೀಲರಿಂದಃ–**

ನಾನು ದ್ವಿತೀಯ ಪಿಯುಸಿ ಓದಿದ್ದೇನೆ. ಅಪಘಾತವು ಮುಖಾಮುಖಿಯಾಗಿ ಡಿಕ್ಕಿಯಾಗಿದ್ದರಿಂದಾಗಿದೆ. ನಾನು ಪೂರ್ವದ ಕಡೆ ಬರುತ್ತಿದ್ದೆ. ಅರ್ಜಿದಾರರು ಪಶ್ಚಿಮದ ಕಡೆ ಬರುತ್ತಿದ್ದರು. ನಾನು ಕೆ ಆರ್ ನಗರ ಕಡೆಯಿಂದ ಹುಣಸೂರು ಕಡೆಗೆ ಬರುತ್ತಿದ್ದೆ. ನಾನು ಆ ಕಡೆಯಿಂದ ಬರುವಾಗ ಎಡಬದಿಯಲ್ಲಿ ಇದ್ದೆ. ಅರ್ಜಿದಾರರು ನನ್ನ ಸಂಪೂರ್ಣ ಬಲಬದಿಗೆ ಬಂದರು. ಅರ್ಜಿದಾರರ ಬೈಕಿನಲ್ಲಿ ಮೂರು ಜನ ಇದ್ದರು. ಸವಾರನ ಮುಂಭಾಗದಲ್ಲಿ ಒಂದು ಲಗೇಜ್ ಬ್ಯಾಗ್ ಇತ್ತು. ಅರ್ಜಿದಾರರು ಒಂದು ಲಾರಿಯನ್ನು ಓವರ್ ಟೇಕ್ ಮಾಡಲು ಹೋಗಿ ಹಂಪ್ಸ್ ನ ಮೇಲೆ ಎಗರಿಸಿ ನಿಯಂತ್ರಣ ತಪ್ಪಿ ನನ್ನ ಸಂಪೂರ್ಣ ಬಲಭಾಗಕ್ಕೆ ಬಂದು ಡಿಕ್ಕಿ ಮಾಡಿದರು. ಅವರಿಗೆ ಸ್ವಲ್ಪ ತೆರಚಿದ ಗಾಯಗಳಾದವು. ನಾನು ಕೂಡ ಬಿದ್ದೆ. ಅರ್ಜಿದಾರರನ್ನು ನಾನೆ ಆಸ್ಪತ್ರೆಗೆ ಕರೆದುಕೊಂಡು ಹೋದೆ.

ಪೊಲೀಸರು ತನಿಖೆಯ ಸಮಯದಲ್ಲಿ ಸ್ಥಳ ಮಹಜರು ಮಾಡಿದ್ದಾರೆ. ಪೊಲೀಸರು ನಕ್ಷೆಯನ್ನು ತಯಾರಿಸಿದ್ದಾರೆ. ನಾನು ಅಪಘಾತಪಡಿಸಿಲ್ಲ ಎಂದು ತನಿಖೆಯ ಸಮಯದಲ್ಲಿ ಪೊಲೀಸರಿಗೆ ಹೇಳಿದ್ದೇನೆ. ನಾನು ಕ್ರಿಮಿನಲ್ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾದೆ. ಅಪಘಾತದ ಸಮಯದಲ್ಲಿ ನನ್ನ ಬಳಿ ಬೈಕ್ ಚಲಾಯಿಸಲು ಲೈಸೆನ್ಸ್ ಇತ್ತು. ನನ್ನ ಲೈಸೆನ್ಸ್ ಬಗ್ಗೆ ಲೈಸೆನ್ಸ್ ಎಕ್ಸ್‌ಟ್ರ್ಯಾಕ್ಟ್ ನ್ನು ಆರ್ ಟಿ ಓ ಕಚೇರಿಯಿಂದ ತಂದು ಹಾಜರಪಡಿಸಲು ತೊಂದರೆ ಇಲ್ಲ. ಅರ್ಜಿದಾರರು ನನಗೆ ಪರಿಚಿತರಲ್ಲ. ನಾನು ಅರ್ಜಿದಾರರಿಗೆ ರೂ 10,000/– ಕೊಟ್ಟ ಬಗ್ಗೆ ದಾಖಲೆ ಇಲ್ಲ. ನಾನು ನನ್ನ ತಂದೆಯ ಮುಂದೆ ಅರ್ಜಿದಾರರಿಗೆ ಹಣ ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ಸುಳ್ಳು ಹೇಳುವ ಹವ್ಯಾಸ ನನಗಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ಅದಕ್ಕೆ ಮಾಹಿತಿಯನ್ನು ನಾನೆ ಕೊಟ್ಟಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ರೂ 10,000/- ವನ್ನು ಮಾನವೀಯತೆ ದೃಷ್ಠಿಯಿಂದ ಠಾಣಾಧಿಕಾರಿಯ ಮುಂದೆ ಅರ್ಜಿದಾರರಿಗೆ ಕೊಟ್ಟಿದ್ದೇನೆಂದು ಬರೆದಿದೆ ಎಂದರೆ ಸರಿ. ನನ್ನ ವಾಹನಕ್ಕೆ ಅಪಘಾತದ ದಿನದಂದು ವಿಮೆ ಚಾಲ್ತಿಯಲ್ಲಿತ್ತು. ನಾನು ಓಡಿಸುತ್ತಿದ್ದ ಬೈಕ್ ಎರಡನೇ ಎದುರುದಾರರಿಗೆ ಸೇರಿದ್ದು. ಎರಡನೇ ಎದುರುದಾರರು ಸದರಿ ವಾಹನದ ಮಾಲೀಕರು ಎಂದು ತೋರಿಸುವ ದಾಖಲೆ ನನ್ನ ಬಳಿ ಇದೆ. ಸದರಿ ಮೂಲ ಆರ್ ಸಿ ಮತ್ತು ಮೂಲ ವಿಮಾ ಪಾಲಿಸಿಯನ್ನು ಹಾಜರುಪಡಿಸಲು ತೊಂದರೆಯಿಲ್ಲ. ನಾನು ಮತ್ತು ಅರ್ಜಿದಾರರು ಶಾಮೀಲಾಗಿ ಸತ್ಯಾಂಶಗಳನ್ನು ಮರೆಮಾಚಿ ಅರ್ಜಿದಾರರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ನನ್ನ ತಪ್ಪಿನಿಂದಾಗಿಲ್ಲ ಎಂದರೆ ಸರಿ. ನನ್ನ ತಪ್ಪಿಲ್ಲದೆ ಇದ್ದರೂ ನಾನು ನ್ಯಾಯಾಲಯದ ಮುಂದೆ ದಂಡ ಕಟ್ಟಿದ್ದೇನೆ ಎಂದರೆ ವಾಹನ ಬಿಡಿಸಿಕೊಳ್ಳುವ ಸಲುವಾಗಿ ದಂಡ ಕಟ್ಟಿದ್ದೇನೆ. ನಾನು ಸಿ ಸಿ ನಂಬರ್ 643/2017 ರಲ್ಲಿ ಜೆ ಎಂ ಎಫ್ ಸಿ ನ್ಯಾಯಾಲಯದ ಮುಂದೆ ಹಾಜರಾಗಿ ತಪ್ಪೊಪ್ಪಿಕೊಂಡು ದಂಡ ಕಟ್ಟಿ ಹೋಗಿದ್ದೇನೆ ಎಂದರೆ ಸರಿ. ನ್ಯಾಯಾಲಯವು ಆರೋಪಣಾ ಸಾರಾಂಶವನ್ನು ನನಗೆ ಕನ್ನಡದಲ್ಲಿಯೆ ಓದಿ ಹೇಳಿದೆ ಎಂದರೆ ಸರಿ. ನಾನು ಸದರಿ ಆರೋಪಣಾ ಸಾರಾಂಶ ಅರ್ಥವಾಗಿದೆ ಎಂದು ನ್ಯಾಯಾಲಯಕ್ಕೆ ಹೇಳಿದ್ದೇನೆ ಎಂದರೆ ಸರಿ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ ಅರ್ಜಿದಾರರಿಗೆ ಸಹಾಯವಾಲಿ ಎಂದು ವರ ಜೊತೆ ಶಾಮೀಲಾಗಿ ಗೊಂದಲ ರೂಪದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜೀವ ಹಾನಿಯಾಗಿದ್ದರೆ ನಾನು ಕ್ರಿಮಿನಲ್ ಪ್ರಕರಣವನ್ನು ನಡೆಸುತ್ತಿದ್ದೆ ಎಂದರೆ ಸರಿ. ಅರ್ಜಿದಾರರಿಗೆ ಸಹಾಯವಾಗಲಿ ಎಂದು ನನ್ನ ತಪ್ಪಿಲ್ಲದೆ ಇದ್ದರೂ ಸಹ ಕ್ರಿಮಿನಲ್ ಪ್ರಕರಣದಲ್ಲಿ ತಪ್ಪೊಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**(ಅರ್ಜಿದಾರರು ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದಲ್ಲಿ ಮೂರನೇ ಎದುರುದಾರರಿಗೆ ಮುಂದುವರೆದ ಪಾಟೀ ಸವಾಲನ್ನು ಮಾಡಲು ಅವಕಾಶವನ್ನು ಕಾಯ್ದಿರಿಸಲಾಗಿದೆ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.